‘ಹೌದು. ನೀವು ಆ್ಯನಿಮಲ್ ಪ್ಲಾನೆಟ್ ನೋಡ್ತಿರಬಹುದಲ್ಲ?’

‘ನಾನೇನು ಸಣ್ಣ ಹುಡುಗನೇ ಅಂಥಾ ಬೆಕ್ಕು ನಾಯಿ ಚಾನೆಲ್ ನೋಡಲಿಕ್ಕೆ? ನನ್ನ ಮೊಮ್ಮಗಳು ನೋಡ್ತಿರ್ತಾಳೆ ಅಂಥವನ್ನು.’

‘ನೀವು ಅದನ್ನು ನೋಡುತ್ತಿದ್ದರೆ ನಿಮಗೆ ಅರ್ಥವಾಗ್ತಿತ್ತು. ದೊಡ್ಡ ದೊಡ್ಡ ಬಾಚಿಹಲ್ಲುಗಳಿರುವ ಇಂಥ ಬೃಹತ್ ಇಲಿಗಳು ದಕ್ಷಿಣ ಅಮೇರಿಕಾದಲ್ಲಿವೆ. ಆದರೆ ಈವತ್ತು ನಾವು ನೋಡಿದವುಗಳು ಅವಕ್ಕಿಂತ ದೊಡ್ಡವಾಗಿದ್ದವು. ಹಂದಿಗಳಿಗಿಂತ ದೊಡ್ಡವು!’

‘ಅಂದರೆ ನಿಮ್ಮ ಪ್ರಕಾರ ಲ್ಯಾಬ್ ಕೆಳಗಿನ ನಿರ್ಲಿಪ್ತತೆಗೆ ಹಂದಿಯಾಕಾರದ ಈ ಇಲಿಗಳೇ ಕಾರಣ ಎನ್ನುವಿರಾ?’

‘ಈಗ ಸರಿಯಾಗಿ ತಿಳಿದುಕೊಳ್ಳತೊಡಗಿದಿರಿ ನೋಡಿ ನೀವು.’

‘ಯಾರನ್ನೋ ಅರೆಸ್ಟ್ ಮಾಡಿಸುತ್ತೇನೆ ಎನ್ನುತ್ತಿದ್ದಿರಿ!’

‘ಬಯೋವೇಸ್ಟ್ ನಿಯಂತ್ರಿಸಬೇಕು ಅಂತ ಬಡಕೊಳ್ತಾನೇ ಇರ್ತೀನಲ್ಲಾ, ಈ ಮೂರ್ಖರು ನನ್ನನ್ನು ‘ಬೃಹತ್ ಪಾಂಡಾ’ ನೋಡಿದಂತೆ ಕೀಳು ದೃಷ್ಟಿಯಿಂದ ನೋಡುತ್ತ, ಬಯೋವೇಸ್ಟ್ ನಿಯಂತ್ರಣ ಬಾತಿಗೆ ಬಾರದ ವಿಷಯ ಅನ್ನೋರ ಹಾಗೆ ಅಲಕ್ಷಿಸುತ್ತಾರೆ. ನಾನು ಹೇಗೆ ಹೇಳಿದರೂ ಕಿವಿಗೊಡುವುದಿಲ್ಲ. ತಮ್ಮ ಕಿವಿಗಳಿಗೆ ಮೊಬೈಲ್ ಕಾರ್ಡ್ ಸೇರಿಸಿಕೊಂಡು ಮ್ಯೂಜಿಕ್ ಕೇಳುತ್ತಾರೆ, ಅಥವಾ ಗೆಳೆಯನೊಂದಿಗೋ ಗೆಳತಿಯೊಂದಿಗೋ ಮಾತಾಡುತ್ತ ಕುಳಿತುಬಿಡುತ್ತಾರೆ.’

‘ಇಂಥವರನ್ನು ಅರೆಸ್ಟ್ ಮಾಡಿಸಬೇಕು ಅನ್ನುತ್ತೀರಾ?’

‘ಡಾ.ಶೇಖ್, ಈ ಬಯೋವೇಸ್ಟ್ ಇದೆಯಲ್ಲಾ’?

‘ಪಾಂಡೇಜೀ ಈ ಶಬ್ದ ಕೇಳಿ ಕೇಳಿ ನಾನೂ ಬೇಸತ್ತಿದ್ದೇನೆ.’

‘ಬೇಸತ್ತುಕೊಳ್ಳೋದು ಸಹಜ. ಆದರೆ ಇಲ್ಲಿ ಕೇಳಿ, ವೇಸ್ಟನ್ನು ಕುಲುಮೆಯಲ್ಲಿ ಹಾಕಿ ಸುಟ್ಟುಬಿಡಬೇಕು. ಈ ಮೂರ್ಖರು ಚಹಾ ಕುಡಿದಾದ ಮೇಲೆ ಕಪ್ಪು ತೊಳೆದ ನೀರನ್ನು ಕೂಡ ಡ್ರೈನೇಜಿಗೆ ಕಳಿಸಿಕೊಡುತ್ತಾರೆ! ಎಂದ ಮೇಲೆ ಇಂಥ ಹೊಸ ಸಂಗತಿಗಳು ಹುಟ್ಟಿಕೊಳ್ಳಲೇಬೇಕಲ್ಲ?’

‘ಎಂಥ ಹೊಸ ಸಂಗತಿ?’

‘ಹೊಸ ಹೊಸ ತಳಿಯ ಪ್ರಾಣಿಗಳು ಹುಟ್ಟಿಕೊಳ್ಳುತ್ತವೆ. ಜೀನ್ಸ್ ಜೋಡಿಸುವ ಪ್ರಯೋಗಗಳ ಮೂಲಕ ಇವುಗಳ ಹತೋಟಿಗೆ ಪ್ರಯತ್ನಿಸಬಹುದು. ಉದಾಹರಣೆಗಾಗಿ ಹೇಳಬೇಕೆಂದರೆ ವಿಷರಹಿತ ಹಾವುಗಳನ್ನು ಸೃಷ್ಟಿಸಬಹುದು. ಜೀನ್ಸ್ ಜೋಡಣೆಯಿಂದ ಒಂದು ತಳಿಯ ಗುಣ ವಿಶೇಷಗಳನ್ನು ಇನ್ನೊಂದು ತಳಿಗೆ ವರ್ಗಾಯಿಸಬಹುದು. ಕುರಿಗಿಂತ ಕಡಿಮೆ ಆಹಾರ ಸೇವಿಸುವ ಆಡುಗಳಿಂದ ಉತ್ತಮ ಗುಣಮಟ್ಟದ ದಪ್ಪ ಉಣ್ಣೆಯನ್ನು ಪಡೆಯಬಹುದು. ನುರಿತ ವಿಜ್ಞಾನಿಗಳ ಮಾರ್ಗದರ್ಶನದಲ್ಲೇ ಇಂಥ ಪ್ರಯೋಗಗಳು ನಡೆಯಬೇಕು. ಜೆನೆಟಿಕ್ ಇಂಜಿನಿಯರಿಂಗ್ ಹಗುರ ವಿಷಯವಲ್ಲ. ಆದರೆ ಯಾರೋ ಮೂರ್ಖರು ಇಲಿಗಳ ಜೀನ್ ಗಳನ್ನು ಹಂದಿಯ ಜೀನ್ ಗಳಿಗೆ ಬೆಸೆದು ಬಿಟ್ಟಿದ್ದಾರೆ. ಆದುದರಿಂದ ಈ ಪರಿಣಾಮ, ಈ ದುರಂತ, ಇಂದಿನ ಈ ದುರ್ಘಟನೆ!’ ವಿವರಿಸಿದರು ಪ್ರೊ.ಪಾಂಡೆ.

ಡಾ.ಶೇಖ್ ಕೆಲವು ನಿಮಿಷ ಏನೂ ಮಾತಾಡಲಿಲ್ಲ. ಕಣ್ಮುಚ್ಚಿಕೊಂಡು ಏನೇನೋ ಲೆಕ್ಕ ಹಾಕುತ್ತ, ಏನೇನೋ ತಮಗೆ ತಾವೇ ಹೇಳಿಕೊಂಡರು.

ಅವರ ಗಂಭೀರತೆಯನ್ನು ಗಮನಿಸಿದ ಪಾಂಡೆ ಅವರು ‘ಏನದು ಡಾ.ಶೇಖ್?’ ಎಂದು ಕೇಳಿದರು.

‘ಏನೇನೋ ಹುಚ್ಚುಚ್ಚಾರ ವಿಚಾರಗಳು’

‘ಅಂಥವು ನಿಮಗೆ ಇದ್ದೇ ಇರುತ್ತವೆ ಬಿಡಿ’

‘ಆದರೆ ನಾನೀಗ ಮಾಡಿದ ವಿಚಾರ ಅದ್ಭುತವಾಗಿದೆ’

‘ಹೌದೇ? ಏನದು?’

‘ಈವತ್ತಿನ ದುರ್ಘಟನೆ ಬಗ್ಗೆ ಯೋಚಿಸಿ. ಕಾರಣೀಭೂತವಾದ ಇವುಗಳನ್ನು ಈಗಿಂದೀಗಲೇ ಕೊಂದು ಬಿಡಬಹುದು. ಆದರೆ ಅದು ತಪ್ಪು. ಒಂದು ಸಂತತಿಯ ನಾಶ ಮಾಡುವುದು ಅಪರಾಧ. ಆದರೆ ಇದೇ ಸಂತತಿಯನ್ನು ಬೆಳೆಯಲು ಪ್ರೋತ್ಸಾಹಿಸಿದರೆ?’

‘ಅಂದರೆ ನಾನೊಂದು ಝೂ ಓಪನ್ ಮಾಡಬೇಕು. ಟಿಕೆಟ್ ಮಾರಬೇಕು ಅಂತ ನಿಮ್ಮ ಲೆಕ್ಕ!’

‘ಹಾಗಲ್ಲ ಪಾಂಡೋಜಿ, ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಈ ಅರ್ಥ್ ಮೂವರ್ಸ್ ಇದ್ದಾರಲ್ಲಾ, ಮಹಾ ಘಟಿಂಗರವರು.’

‘ಅವರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಗೋರಿ ತೋಡುವವರ ಪೈಕಿ ನಾನು ಅಲ್ಲವೇ ಅಲ್ಲ.’

‘ಅದಕ್ಕೇ ನಿಮಗೆ ಹೊರಗೆ ನಡೀತಿರೋದು ಗೊತ್ತಿಲ್ಲ. ಈ ಅರ್ಥ್ ಮೂವರ್ಸ್ ಪಡೆಯುವ ಬಾಡಿಗೆ ದರದ ಬಗ್ಗೆ ನಿಮಗೆ ಗೊತ್ತಿಲ್ಲ. ವಿಪರೀತ ದರ, ಕೇಳಿದರೆ ಮೂರ್ಛೆ ಹೋಗುತ್ತೀರಿ. ಅವರ ಮೊನೊಪೊಲಿಯನ್ನು ನಿರ್ನಾಮ ಮಾಡಬಹುದು ನಾವಿಬ್ಬರೂ ಒಂದಾಗಿ. ಹೇಗಂತೀರಾ? ಹಂದಿ ರೂಪದ ಈ ಇಲಿಗಳನ್ನೇ ನಾವು ಯಾಕೆ ಅರ್ಥ್ ಮೂವರ್ಸ್ ಆಗಿ ಉಪಯೋಗಿಸಬಾರದು?’

‘ಎಂಥಾ ಬ್ರಿಲ್ಲಿಯಂಟ್ ಐಡಿಯಾ ಡಾ.ಶೇಖ್ ಅವರೇ ನಿಮ್ಮದೂ’

‘ಆದರೊಂದು ಸಂದೇಹ. ಈ ಇಲಿಗಳು ತಮಗೆ ಬೇಕೆನಿಸಿದತ್ತ ಅಗಿಯುತ್ತ ಹೊರಟರೆ?’

‘ಓ ಆ ಕೆಲಸ ನನಗೆ ಬಿಡಿ. ಹಾಗಾಗದಂತೆ ನಾನು ನೋಡಿಕೊಳ್ತೇನೆ. ಅವುಗಳು ಹೇಗೆ  ಹೇಗೆ ಯಾವ ಯಾವ ದಿಕ್ಕಿನಲ್ಲಿ ಮುಂದುವರಿಯಬೇಕು ಎಂಬುದನ್ನು ನಾನು ನಿಯಂತ್ರಿಸುತ್ತೇನೆ. ಹಂದಿಯಾಕಾರದ ಈ ಇಲಿಗಳು ಹೋರಿಗಳಂತೆ ಓಡೋಡಿ ಕೆಲಸ ಮಾಡುವಂತೆಯೂ ಮಾಡುತ್ತೇನೆ. ನನಗಿದೆಲ್ಲ ಕರತಲಾಮಲಕ’ – ಪ್ರೊ.ಪಾಂಡೆ ಅಭಯಹಸ್ತ ಚಾಚಿದರು.

ಡಾ.ಶೇಖ್ ಅವರಿಗೆ ಖುಶಿ, ಜೊತೆಜೊತೆಗೇ ಅನುಮಾನ, ಈ ಇಲಿಗಳನ್ನು ನಿಯಂತ್ರಿಸಲು ಸಾಧ್ಯವೇ?

‘ನಿಜವಾಗಿಯೂ?’ – ಕೇಳಿಯೇಬಿಟ್ಟರು.

‘ತುಂಬಾ ಸರಳ ಕೆಲಸ ಡಾ.ಶೇಖ್’ ಎನ್ನುತ್ತ, ಕಪ್ಪು, ಸ್ಪೂನ್ ಗಳನ್ನು ಹೊಂದಿಸಿಡುತ್ತ ‘ಇಲ್ನೋಡಿ, ಇಲ್ಲಿ ಕಪ್ಪು ಇದೆ, ಇಲ್ಲಿ ಸ್ಪೂನ್ ಇದೆ. ಈ ಸ್ಪೂನ್ ಒಂದು ಪ್ರಾಣಿ ಅಂದ್ಕೊಳ್ಳಿ. ಇದು ಹೋಗಿ ಕಪ್ಪನ್ನು ಸೇರಬೇಕು. ಅದಕ್ಕಾಗಿ ಏನ್ಮಾಡಬೇಕು? ಕಪ್ಪಿನಲ್ಲಿ ಒಂದು ಸ್ಪೀಕರ್ ಇಡಬೇಕು, ಅದು ‘ಮೇಟಿಂಗ್ ಕರೆ’ ಕೊಡಬೇಕು ಈ ಪ್ರಾಣಿಗೆ. ಸ್ಪೀಕರ್ ಅಂಥ ಧ್ವನಿ ಹೊರಡಿಸಬೇಕು. ಆಗ ಈ ಪ್ರಾಣಿ ತಾನಾಗಿಯೇ ಹೋಗಿ ಕಪ್ಪನ್ನು ಸೇರುತ್ತದೆ’ ಎನ್ನುತ್ತ ಸ್ಪೂನ್ ಸರಿಸುತ್ತ ಸರಿಸುತ್ತ ಕಪ್ಪಿನಲ್ಲಿಟ್ಟುಬಿಟ್ಟರು.

‘ಹೌದಲ್ಲಾ!’ ಉದ್ಗರಿಸಿದರು ಶೇಖ್.

ಮರುಕ್ಷಣವೇ ಮತ್ತೊಂದು ಯೋಚನೆ – ‘ಆ ಕಡೆ ಹೋಗಬಾರದೆಂದರೆ?’

‘ಅದೂ ಸರಳ. ಅಲ್ಲಿ ಮೇಟಿಂಗ್ ಕರೆ ಬದಲಾಗಿ ಚೀತ್ಕಾರದ ಧ್ವನಿ ಹೊರಡಿಸಬೇಕು ಅಲ್ಲಿಯ ಸ್ಪೀಕರ್.’

‘ಬ್ರಿಲ್ಲಿಯಂಟ್. ನನ್ನ ಹಾಗೆ ನೀವೂ ಅಮೋಘ ವಿಚಾರಗಳನ್ನೇ ಹೊಂದಿದ್ದೀರಿ. ನಾಳೆಯಿಂದಲೇ ನಾವು ಒಂದುಗೂಡಿ ಈ ಪ್ರೊಜೆಕ್ಟನ್ನು ಕೈಗೆತ್ತಿಕೊಳ್ಳೋಣ ಏನಂತೀರಿ?’

‘ ಬೈ ಆಲ್ ಮೀನ್ಸ್. ಓಕೆ.’

ಕೈ ಜೋಡಿಸಿದರು ಇಬ್ಬರೂ ವಿಜ್ಞಾನಿಗಳು.

***

ಇದಾಗಿ ಎರಡೂವರೆ ವರ್ಷಗಳು ಸಂದಿವೆ.

ಹಳೆಯ ಲ್ಯಾಬ್ ಇದ್ದಲ್ಲಿಯೇ ಹೊಸ ಲ್ಯಾಬ್ ತಲೆಯೆತ್ತಿ ನಿಂತಿದೆ.

ಹತ್ತೊಂಬತ್ತು ‘ಹಂದಿಲಿ’ಗಳು ಬೇರೆ ಬೇರೆ ಕಡೆ ಕೆಲಸಕ್ಕೆ ಹೋಗಲು ಸನ್ನದ್ಧವಾಗಿ ನಿಂತಿವೆ  ಬೃಹತ್ ಕಟ್ಟಡಗಳಿಗೆ ಅಡಿಪಾಯ ಹಾಕಲು, ದೊಡ್ಡ ದೊಡ್ಡ ಸುರಂಗ ಮಾರ್ಗಗಳನ್ನು ನಿರ್ಮಿಸಲು. ಸರಕಾರದಿಂದ ಬರಲಿರುವ ಹಸಿರು ನಿಶಾನೆಗಾಗಿ ಕಾಯುತ್ತಿದ್ದಾರೆ ಇಬ್ಬರೂ ವಿಜ್ಞಾನಿಗಳು. ಆರಂಭದಲ್ಲಿ ಈ ಲ್ಯಾಬ್ ಬಗ್ಗೆ ಹೇಳುವಾಗ, ಯಾರದೋ ತಲೆ ಇಲ್ಲದವರ ಯೋಜನೆ ಅಂತ ಹೇಳಿದ್ದೆನಲ್ಲಾ. ಅವರೇ ಈ ಇಬ್ಬರೂ!

ಹೇಳಿಕೊಳ್ಳುವಂಥ ಸಂಬಂಧಗಳಿಲ್ಲದಿದ್ದರೂ ವಿಜ್ಞಾನದ ಎರಡು ಶಾಖೆಗಳು ಕೂಡಿ ಕೆಲಸ ಮಾಡಿದರೆ ಏನೆಲ್ಲಾ ಅದ್ಭುತಗಳನ್ನು ಸಾಧಿಸಬಹುದು, ಏನಂತೀರಿ?

■